ಸತ್ಯಾಗ್ರಹ ಮಾಡಿದರು. ಗಾಂಧೀಜಿಯವರು ವಸಾಹತುಶಾಹಿಯ ವಿರುದ್ಧ ಎತ್ತಿ ಹಿಡಿದ ಒಂದು ಹಿಡಿ ಉಪ್ಪು ಅಂಬೇಡ್ಕರ್ ಅವರು ವರ್ಣಾಹತುಶಾಹಿ ವಿರುದ್ಧ ಎತ್ತಿ ಹಿಡಿದ ಒಂದು ಬೊಗಸೆ ನೀರು – ಎರಡೂ ಪ್ರತಿರೋಧದ ಅತ್ಯದ್ಭುತ ಪ್ರತೀಕಗಳು. ನಮಗೆ ಈ ಎರಡೂ ಪ್ರೇರಣೆಯಾಗಬೇಕು. ಎರಡೂ ಕ್ರಿಯೆಗಳ ಆಳದಲ್ಲಿರುವ ಜಾತ್ಯತೀತತೆ ಮುಖ್ಯವಾಗಬೇಕು. ಹಿಂದೂ ಧರ್ಮ, ದೇವರುಗಳನ್ನು ನಂಬಿದ ಗಾಂಧೀಜಿ, ಯಾವುದೇ ಜಾತಿ ಮತ್ತು ಧರ್ಮಗಳಿಗೆ ಸೇರದೆ ಇರುವ ಉಪ್ಪನ್ನು ಪ್ರತಿರೋಧದ ಪ್ರತೀಕವಾಗಿಸಿದ್ದು, ನೈಸರ್ಗಿಕ ಕೊಡುಗೆಯಾದ ನೀರನ್ನು ಅಸ್ಪೃಶ್ಯರು ಮುಟ್ಟುವ ಹೋರಾಟವನ್ನು ಅಂಬೇಡ್ಕರ್ ರೂಪಿಸಿದ್ದು, ಜಾತ್ಯತೀತತೆಗೆ ಸಾರ್ಥಕ ಸಾಕ್ಷಿಗಳಾಗಿವೆ, ಚಾರಿತ್ರಿಕ ಮಹತ್ವ ಪಡೆದಿವೆ.

ಇದೇ ಸಂದರ್ಭದಲ್ಲಿ ಚಾರಿತ್ರಿಕ ಚಲನಶೀಲತೆಯ ಸಕಾರಾತ್ಮಕ ಚಹರೆಗೆ ನಿದರ್ಶನವಾದ ಒಂದು ಪ್ರಕ್ರಿಯೆಯನ್ನು ಇಲ್ಲಿ ಗಮನಿಸಬೇಕು. ಗಾಂಧೀಜಿಯವರು 1915ರಲ್ಲಿ ದಕ್ಷಿಣ ಆಫ್ರಿಕಾದಿಂದ ಬಂದಾಗ ಫುಲ್‌ಸೂಟ್ ಧರಿಸಿದ್ದರು. ಗೋಖಲೆಯವರ ಸಲಹೆ ಮೇರೆಗೆ ಒಂದು ವರ್ಷಕಾಲ ರೈಲಿನ ಮೂರನೇ ದರ್ಜೆ ಬೋಗಿಯಲ್ಲಿ ಕುಳಿತು ದೇಶ ಸುತ್ತಿದ್ದರು. ಹಸಿವಿನಿಂದ ನರಳುವ ಜನರನ್ನು ಕಂಡರು, ಮೈತುಂಬ ಬಟ್ಟೆಯಿಲ್ಲದ ಕೋಟ್ಯಂತರ ಮಂದಿಯನ್ನು ನೋಡಿದರು. ತಮ್ಮ 'ತ್ರೀಪೀಸ್ ಸೂಟು' ವ್ಯರ್ಥ ಎನ್ನಿಸಿ ಅರೆಬೆತ್ತಲೆ ಉಡುಪನ್ನು ಧರಿಸತೊಡಗಿದರು. ಡಾ. ಅಂಬೇಡ್ಕರ್ ಅರೆಬೆತ್ತಲೆ ಜಗತ್ತಿನಿಂದ ಬಂದವರು, ಅಸ್ಪೃಶ್ಯತೆಯ ಕರಾಳತೆಯನ್ನು, ಕ್ರೌರ್ಯವನ್ನು ಅನುಭವಿಸಿದವರು. ಮದುವೆಯಾಗಲು ಒಂದು ಕಲ್ಯಾಣಮಂಟಪವನ್ನೂ ಕೊಡದ ಜಾತಿವಾದಿಗಳಿಂದ, ಮೀನು ಮಾರ್ಕೆಟ್‌ನಲ್ಲಿ ಮದುವೆಯಾದರು. ಈಗ ಗಮನಿಸಿ: ಫುಲ್‌ಸೂಟುಧಾರಿ ಗಾಂಧೀಜಿ ಅರೆಬೆತ್ತಲೆ ಉಡುಪಿಗೆ ರೂಪಾಂತರ ಹೊಂದಿದರೆ, ಅರೆಬೆತ್ತಲೆ ಜಗತ್ತಿನಿಂದ ಬಂದ ಅಂಬೇಡ್ಕರ್ ಫುಲ್‌ಸೂಟುಧಾರಿಯಾದರು. ಪರಸ್ಪರ ವಿರುದ್ಧ ದಿಕ್ಕಿನ ಈ ಚಲನೆಗಳು ಚಾರಿತ್ರಿಕ ಎಂಬುದು ನನ್ನ ತಿಳಿವಳಿಕೆ. ಫುಲ್‌ಸೂಟ್‌ನಿಂದ ಅರೆಬೆತ್ತಲೆ ಉಡುಪಿಗೆ ಇಳಿದ ಗಾಂಧೀಜಿ ಪಾಪಪ್ರಜ್ಞೆಯ ಪ್ರತೀಕವಾದರೆ, ಅರೆಬೆತ್ತಲೆ ಜಗತ್ತಿನಿಂದ ಫುಲ್‌ಸೂಟುಧಾರಿಯಾದ ಅಂಬೇಡ್ಕರ್ ಜಾಗೃತಪ್ರಜ್ಞೆಯ ಪ್ರತೀಕವಾದರು. ಉಡುಪಿನ ಬದಲಾವಣೆ ಮಾತ್ರವಲ್ಲ. ಗಾಂಧೀಜಿಯವರ ಪಾಪಪ್ರಜ್ಞೆಯೂ ಜಾಗೃತ ಪ್ರಜ್ಞೆಯೇ ಆಗಿದ್ದು, ಅದೊಂದು ಅಪವರ್ಗೀಕರಣದ ಪ್ರಕ್ರಿಯೆಯಾಗಿದೆ. ಅಂಬೇಡ್ಕರ್ ಅವರಿಗೆ ಫುಲ್‌ಸೂಟ್ ಎನ್ನುವುದು, ಅನ್ನ ವಸ್ತ್ರಾದಿಗಳನ್ನು ನಿರಾಕರಿಸಿದ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಸೆಟೆದು ನಿಂತ ಪ್ರತಿರೋಧವೂ ಆಗಿದೆ. ಈ ಎರಡು ಚಾರಿತ್ರಿಕ ಪ್ರಕ್ರಿಯೆಗಳ ಹಿಂದಿನ ಪ್ರತಿರೋಧ ಪ್ರಕ್ರಿಯೆಯನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ಆಗ ಗಾಂಧೀಜಿ ಸರಿಯಾಗಿ ಅರಿವಾಗುತ್ತಾರೆ.



## ಬರಗೂರು ರಾಮಚಂದ್ರಪ್ಪ

ಲೇಖಕ, ಸಿನಿಮಾ ನಿರ್ದೇಶಕ, ಅಧ್ಯಾಪಕ ಬರಗೂರು ರಾಮಚಂದ್ರಪ್ಪ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಬರಗೂರು ಗ್ರಾಮದವರು. ಸಾಂಸ್ಕೃತಿಕ ಚಿಂತನೆಗೆ ವಿಶಿಷ್ಟ ನೋಟಗಳನ್ನು ಕೊಟ್ಟ ಬರಗೂರು ತಮ್ಮ ಕತೆ, ಕಾದಂಬರಿ, ಕಾವ್ಯದಿಂದ ಕನ್ನಡ ಸಾಹಿತ್ಯದ ಮೇಲೂ ಪ್ರಭಾವ ಬೀರಿದ ಲೇಖಕ. 'ಸೂತ್ರ', 'ಉಕ್ಕಿನ ಕೋಟೆ', 'ಒಂದು ಊರಿನ ಕತೆ', 'ಬೆಂಕಿ', 'ಸೂರ್ಯ', 'ಶಬರಿ', 'ಸುಂಟರ ಗಾಳಿ', 'ಕಪ್ಪು ನೆಲದ ಕೆಂಪು ಕಾಲು', 'ಸಾಹಿತ್ಯ ಮತ್ತು ರಾಜಕಾರಣ', 'ಸಂಸ್ಕೃತಿ ಮತ್ತು ಸೃಜನಶೀಲತೆ', 'ಬಂಡಾಯ ಮತ್ತು ಸಾಹಿತ್ಯಮೀಮಾಂಸೆ' ಅವರ ಪ್ರಮುಖ ಪುಸ್ತಕಗಳಾಗಿವೆ. 'ಒಂದು ಊರಿನ ಕಥೆ', 'ಕೋಟೆ', 'ಭಾಗೀರತಿ', 'ಹಗಲುವೇಷ', 'ಸೂರ್ಯ', 'ಶಾಂತಿ' ಅವರ ನಿರ್ದೇಶನದ ಕೆಲವು ಸಿನಿಮಾಗಳಾಗಿವೆ.